ಆಶ್ರಯ ಸಮಿತಿಯ ಮನೆಗಳು

888 (988) ಶ್ರೀ ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) 1995-96, 1996-97, 98-99 ನೇ ಸಾಲಿನ ತುಮಕೂರು ಜಿಲ್ಲೆಯ ಆಶ್ರಯ ಸಮಿತಿಗೆ ಮನೆ ನಿರ್ಮಿಸಲು ಮಂಜೂರಾದ ಅನುದಾನ ಎಷ್ಟು; ಈ ಅನುದಾನದಲ್ಲಿ ಯಾವಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ?

ಆ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಆಶ್ರಯ ಸಮಿತಿ ಮನೆಗಳ ನಿರ್ಮಾಣಕ್ಕೆ ಸರ್ಕಾರದಿಂದ ಮಂಜೂರಾಗಿರುವ ಅನುದಾನ ಎಷ್ಟು; ಎಷ್ಟು ಫಲಾನುಭವಿಗಳಿಗೆ ಅನುದಾನವನ್ನು ಮಂಜೂರು ಮಾಡಲಾಗಿದೆ; ಮಂಜೂರಾಗದೇ ಇರುವ ಫಲಾನುಭವಿಗಳ ಸಂಖ್ಯೆ ಎಷ್ಟು;

ಇ) ಕೊರಟಗೆರೆ ತಾಲ್ಲೂಕಿನಲ್ಲಿ ಫಲಾನುಭವಿಗಳಿಗೆ ಮಂಜೂರು ಮಾಡಿರುವ ಆಶ್ರಯ ನಿವೇಶನಗಳ ಸಂಖ್ಯೆ ಎಷ್ಟು; ತಾಲ್ಲೂಕಿನ ಯಾವ ಯಾವ ಸ್ಥಳದಲ್ಲಿ ಸರ್ಕಾರಿ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು ನಿವೇಶನಗಳನ್ನು ಹಂಚಲಾಗಿದೆಯೆ;

ಈ) ಹಾಗಿದ್ದಲ್ಲಿ ಹಂಚಿಕೆಯಾಗದೇ ಉಳಿದಿರುವ ನಿವೇಶನ ರಹಿತರಿಗೆ ನಿವೇಶನ ಹಂಚಿಕೆ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ)

ವರ್ಷ	ಮನೆಗಳು	ಮಂಜೂರಾದ ಮೊತ್ತ (ರೂ. ಲಕ್ಷಗಳಲ್ಲಿ)
1995-96	3666	665.554
1996-97	2280	425. 120
1997-98	2430	414.966
1998-99	2300	460. 359
ಒಟ್ಟು		1965.999

1995-96 ರಿಂದ 1998-99 ರವರೆಗೆ ಬಿಡುಗಡೆ ಮಾಡಿದ ಅನುದಾನ

ಕ್ರಮ ಸಂಖ್ಯೆ	ತಾಲ್ಲೂಕು ಹೆಸರು	ಬಿಡುಗಡೆ ಮಾಡಿದ ಹಣ
1	ತುಮಕೂರು	204.713
2	ಗುಬ್ಬಿ	177.560
3	ಕುಣಿಗಲ್	197.650
4	ತಿಪಟೂರು	177.250
5	ತುರುವೇಕೆರೆ	216.337
6	ಚಿಕ್ಕನಾಯಕನಹಳ್ಳಿ	182.450
7	ಮಧುಗಿರಿ	186.470
8	ಸಿರಾ	208.460
9	ಕೊರಟಗೆರೆ	215.660
10	ಪಾವಗಡ	197.160
	ಒಟ್ಟು	**1963.710**

ಆ)

ವರ್ಷ	ಮಂಜೂರಾದ ಮನೆಗಳ ಸಂಖ್ಯೆ	ಮಂಜೂರಾದ ಫಲಾನುಭವಿಗಳ ಸಂಖ್ಯೆ	ಮಂಜೂರಾದ ಫಲಾನುಭವಿಗಳ ಸಂಖ್ಯೆ	ಬಿಡುಗಡೆಯಾದ (ರೂ. ಲಕ್ಷಗಳಲ್ಲಿ)
95-96	367	367	-	63.210
96-97	297	267	30	53.380
97-98	275	223	52	46.820
98-99	275	222	53	52.250
	1214	**1079**	**135**	**215.660**

೩)

ವರ್ಷ	ಪಲಾನುಭವಿಗಳನ್ನು ಹಂಚಿಕೆ ಮಾಡಿದ ನಿವೇಶನಗಳ ಸಂಖ್ಯೆ
1995-96	-
1996-97	794
1997-98	055
1998-99	091
1999-2000	042
	ಒಟ್ಟು 982

ಕ್ರ. ಸಂ	ಹಳ್ಳಿಗಳು	ವಿಸ್ತೀರ್ಣ ಎ-ಗು	ಕ್ರ. ಸಂ	ಹಳ್ಳಿಗಳು	ವಿಸ್ತೀರ್ಣ ಎ-ಗು
1.	ಆಲಪ್ಪನಹಳ್ಳಿ	02-00	15	ಎಲೆರೇಂಪುರ	01-20
2.	ಮನುವಿನಕೆರೆ	05-00	16	ಕರಿದುಗ್ಗನಹಳ್ಳಿ	00-28
3.	ದಾಸಲಕುಂಟೆ	01-38	17	ಪತಗನಹಳ್ಳಿ	02-38
4.	ಪುಟ್ಟಸಂದ್ರ	02-36	18	ದುದ್ದನಹಳ್ಳಿ	01-14
5.	ಅರಸಾಪುರ	02-10	19	ಚಿ.ಗೊಲ್ಲಹಳ್ಳಿ	02-06
6.	ದೊಡ್ಡಸೇಗೆರೆ	03-00	20	ಡಿ.ನಾಗನಹಳ್ಳಿ	02-20
7.	ಚಿಕ್ಕಸೆಗೆರೆ	02-26	21	ಮಾವತ್ತೂರು	02-22
8.	ಕಾಸಾಪುರ	05-00	22	ಕುರುಡು ಗೊಂಡನ ಹಳ್ಳಿ	01-36
9.	ಕೋಲಾಲ	03-00	23	ನೇಗಲಾಲ	02-14
10.	ವಾಮುಚಿಹಳ್ಳಿ	01-06	24	ತರಾಟೆ	01-22
11.	ಗಡ್ಡೇನ ಹಳ್ಳಿ	00-38	25	ಗಿಡ್ಡಚಿಕ್ಕನಹಳ್ಳಿ	01-28
12.	ಚೀಲಗನಹಳ್ಳಿ	05-26	26	ಲಿಂಗಾಪುರ	01-30
13.	ಅಕ್ಕಿರಾಂಪುರ	11-26	27	ಶಂಬೂನಹಳ್ಳಿ	01-12
14.	ಸಿಂಗ್ರಿಹಳ್ಳಿ	01-26		ಒಟ್ಟು	73-03

ಈ) ಕೊರಟಗೆರೆ ತಾಲ್ಲೂಕಿನಲ್ಲಿ 5758 ನಿವೇಶನ ರಹಿತರನ್ನು ಗುರುತಿಸಲಾಗಿದೆ. ಇಲ್ಲಿಯವರೆಗೆ 982 ನಿವೇಶನ ಹಂಚಿಕೆ ಮಾಡಿದೆ. ಉಳಿಕೆ 4776 ಜನರಿಗೆ ನಿವೇಶನ ಲಭ್ಯತೆ ಅನ್ವಯ ಆದ್ಯತೆ ಮೇರೆಗೆ ನಿವೇಶನಗಳನ್ನು ವಿತರಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ಕೊರಟಗೆರೆ ತಾಲ್ಲೂಕಿಗೆ ಬೆಂಗಳೂರಿನಿಂದ ಹೆಚ್ಚಿನ ಬಸ್ಸುಗಳ ಸೌಕರ್ಯ

889 (990) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿಗೆ ಬೆಂಗಳೂರಿನಿಂದ ಡಬಸ್‌ಪೇಟೆ ಮಾರ್ಗ ಗೊರವನಹಳ್ಳಿ, ಲಕ್ಷ್ಮೀದೇವಾಲಯ, ದೇವರಾಯನ ದುರ್ಗ ಮಾರ್ಗ ಕೊರಟಗೆರೆಗಳ ಪ್ರತಿ ದಿನ ಸಂಚರಿಸುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳ ಸಂಖ್ಯೆ ಎಷ್ಟು;

ಆ) ಈ ಮಾರ್ಗದಲ್ಲಿ ಪ್ರತಿದಿನ ಅಧಿಕ ಸಂಖ್ಯೆಯಲ್ಲಿ ಪ್ರಯಾಣಿಕರು ಪ್ರಯಾಣಿಸುತ್ತಿರುವುದರಿಂದ ಹೆಚ್ಚಿನ ಬಸ್ಸಿನ ಸೌಕರ್ಯವನ್ನು ಈ ಮಾರ್ಗದಲ್ಲಿ ಒದಗಿಸಲಾಗಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಈ ಮಾರ್ಗದ ಪ್ರಯಾಣಿಕರಿಗೆ ಹೆಚ್ಚಿನ ಬಸ್ಸಿನ ಸೌಕರ್ಯವನ್ನು ಒದಗಿಸಿಕೊಡುವುದು ಯಾವಾಗ?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬೆಂಗಳೂರಿನ ಗೊರವನಹಳ್ಳಿ, ಲಕ್ಷ್ಮೀದೇವಾಲಯಕ್ಕೆ (ತೀರ್ಥ) ಪ್ರತಿ ದಿನ ನಾಲ್ಕು ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಬೆಂಗಳೂರಿನಿಂದ ಡಾಬಸ್‌ಪೇಟೆ, ದೇವರಾಯನ ದುರ್ಗ ಮತ್ತು ಕೊರಟಗೆರೆ, ಮಾರ್ಗವಾಗಿ ಕೊಂಡ ವಾಡಿಗೆ ಪ್ರತಿದಿನ ಒಂದು ಸಾರಿಗೆಯನ್ನು ಕಾರ್ಯಚರಣೆ ಮಾಡಲಾಗುತ್ತಿದೆ.

ಆ) ಶುಕ್ರವಾರಗಳು, ಭಾನುವಾರಗಳು ಮತ್ತು ಸಾರ್ವತ್ರಿಕ ರಜಾ ದಿನಗಳಂದು ಹೆಚ್ಚಾಗುವ ಸಂಚಾರ ಒತ್ತಡಕ್ಕೆ ಅನುಗುಣವಾಗಿ ಬೆಂಗಳೂರಿನಿಂದ ಗೊರವನಹಳ್ಳಿ ದೇವಸ್ಥಾನಕ್ಕೆ (ತೀರ್ಥ) ನಾಲ್ಕು ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರತಿ ವರ್ಷವೂ ಹೆಚ್ಚುವರಿ ಬಸ್ಸುಗಳನ್ನು ಕಾರ್ಯಾಚರಣೆ ಮಾಡುವ ಜಾತ್ರೆ ಅವಧಿಯು ಹೊರತು ದೇವರಾಯನದುರ್ಗಕ್ಕೆ ಪ್ರಯಾಣಿಕರ ಒತ್ತಡ ಕಡಿಮೆಯಿರುತ್ತದೆ. ಆದಾಗ್ಯೂ ಭಾನುವಾರಗಳು ಮತ್ತು ರಜಾ ದಿವಸಗಳಂದು ದೇವರಾಯನದುರ್ಗಕ್ಕೆ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲು ಆಲೋಚಿಸಲಾಗಿದೆ.

ಇ) ಒದಗಿಸಲಾಗಿರುವ ಸಾರಿಗೆಗಳು ಸದ್ಯಕ್ಕೆ ಸಾಕಾಗುತ್ತವೆ. ಅಗತ್ಯ ಕಂಡು ಬಂದಂತೆ ಈ ಮಾರ್ಗಗಳಲ್ಲಿ ಹೆಚ್ಚುವರಿ ಸಾರಿಗೆಗಳನ್ನು ಕಾರ್ಯಾಚರಣೆ ಮಾಡಲಾಗುವುದು.

ಗೃಹಮಂಡಳಿಯಿಂದ ಮನೆಗಳ ಹಂಚಿಕೆ

890 (991) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?